ಮಾನ್ಯ ವಿಧಾನಸಭಾ ಸದಸ್ಯರಾದ ಪ್ರಭು .ಬಿ. ಚೌವ್ಹಾಣ್ (ಔರಾದ್) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1632 ಕ್ಕೆ ಉತ್ತರ

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಹಿಂದುಳಿದ ವರ್ಗಗಳ ಸಮುದಾಯದವರ ಅಭಿವೃದ್ಧಿ ಹಿತದೃಷ್ಟಿಯಿಂದ 2008-09 ರಿಂದ 2010-11 ರ ಅವಧಿಯಲ್ಲಿ ಮಂಜೂರಾಗಿ ಪ್ರಾರಂಭವಾಗಿರುವ ನಿಗಮ, ಪ್ರಾಧಿಕಾರ ಮತ್ತು ಮಂಡಳಿಗಳು ಯಾವುವು; ಈ ಸಂಸ್ಥೆಗಳಿಗೆ ಬಿಡುಗಡೆಯಾದ ಮತ್ತು ಖರ್ಚಾದ ಅನುದಾನ ಹಾಗೂ ಯಾವ ಯಾವ ಉದ್ದೇಶ/ಕಾರ್ಯಕ್ರಮಗಳಿಗೆ ಅನುದಾನ ಬಳಸಲಾಯಿತು. ಲಾಭ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು; (ವಾರ್ಷಿಕ ಮತ್ತು ಪರಿಶಿಷ್ಟ ಜಾತಿ/ಪಂಗಡಗಳು ನಿಗಮ/ಪ್ರಾಧಿಕಾರವಾರು ಸಂಪೂರ್ಣ ಮಾಹಿತಿ ನೀಡುವುದು) | ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಉತ್ತರಿಸಬೇಕಾಗಿದೆ. |
| ಆ | ಈ ಅವಧಿಯಲ್ಲಿ ಹಿಂದುಳಿದ ವರ್ಗದವರ ಸಮುದಾಯದವರಿಗೆ ಹಾಗೂ ಈ ಸಮುದಾಯಗಳ ಪುಣ್ಯಪುರುಷರುಗಳ ಹೆಸರಿನಲ್ಲಿ ಮಂಜೂರಾಗಿ ನಿರ್ಮಾಣಗೊಂಡ ಒಟ್ಟು ಭವನಗಳೆಷ್ಟು; ಪ್ರತಿ ಭವನಗಳ ನಿರ್ಮಾಣಕ್ಕೆ ಬಿಡುಗಡೆಯಾದ ಮತ್ತು ಖರ್ಚಾದ ಅನುದಾನವೆಷ್ಟು; (ನಿರ್ಮಾಣವಾದ ಸ್ಥಳ ಸಹಿತ ಸಮುದಾಯವಾರು, ಪುಣ್ಯಪುರಷರ ಹೆಸರಿನಡಿ ನಿರ್ಮಾಣವಾದ ಭವನ ಮತ್ತು ವಾರ್ಷಿಕವಾರು ಸಂಪೂರ್ಣ ಮಾಹಿತಿ ನೀಡುವುದು) | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ 2008-09 ರಿಂದ 2010-11ನೇ ಸಾಲಿನ ವರೆಗೆ ವಿವಿಧ ಸಮುದಾಯಗಳ ಅಭಿವೃದ್ಧಿ ಕಾರ್ಯಕ್ರಮದಡಿ ಹಿಂದುಳಿದ ವರ್ಗಗಳ ಜನಾಂಗದ ಸಂಘ-ಸಂಸ್ಥೆಗಳಿಗೆ ಮಂಜೂರು ಮಾಡಿ, ನಿರ್ಮಾಣಗೊಂಡಿರುವ ಸಮುದಾಯ ಭವನಗಳ ವಿವರ ಈ ಕೆಳಕಂಡತ್ತಿದೆ.<br><br>(see table below)<br><br>2008-09 ರಿಂದ 2010-11ನೇ ಸಾಲಿನ ವರೆಗೆ ಮಂಜೂರಾತಿ ನೀಡಿರುವ ಸಮುದಾಯ ಭವನಗಳಿಗೆ ಬಿಡುಗಡೆಯಾದ ಮತ್ತು ಖರ್ಚಾದ ಅನುದಾನದ ವರ್ಷವಾರು ವಿವರಗಳನ್ನು ಅನುಬಂಧ-1, 1ಎ ಮತ್ತು 1ಬಿರಲ್ಲಿ ಒದಗಿಸಲಾಗಿದೆ. |

| ಕ್ರ.ಸಂ | ವರ್ಷ | ಬಿಡುಗಡೆ ಮಾಡಿರುವ ಮೊತ್ತ (ರೂ.ಲಕ್ಷಗಳಲ್ಲಿ) | ಭವನಗಳ ಸಂಖ್ಯೆ |
|---|---|---|---|
| 1 | 2008-09 | 852.50 | 58 |
| 2 | 2009-10 | 1173.25 | 119 |
| 3 | 2010-11 | 1176.33 | 59 |
| | ಒಟ್ಟು | 3202.08 | 236 |

| | | |
|---|---|---|
| ಇ | ಈ ಅವಧಿಯಲ್ಲಿ ಹಿಂದುಳಿದ ವರ್ಗಗಳ ಸಮುದಾಯದ ಯಾವ ಯಾವ ಮಠ ಮಾನ್ಯಗಳಿಗೆ ಶಿಕ್ಷಣ ಸಂಸ್ಥೆ ಮತ್ತು ಇತರೆ ಸಂಸ್ಥೆಗಳಿಗೆ ನಿವೇಶನ/ಜಾಗ ಅಥವಾ ಅನುದಾನ ಮಂಜೂರು ಮಾಡಲಾಗಿರುತ್ತದೆ; ಮಂಜೂರು ಮಾಡಿದ್ದಲ್ಲಿ, ಮಂಜೂರು ಮಾಡಿದ ನಿವೇಶನ/ಜಾಗ ಹಾಗೂ ಬಿಡುಗಡೆ ಮಾಡಲಾದ ಅನುದಾನವೆಷ್ಟು; ಬಿಡುಗಡೆ ಮಾಡಿದ ಅನುದಾನದಲ್ಲಿ ಯಾವ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ? (ಹಿಂದುಳಿದ ವರ್ಗಗಳ ಸಮುದಾಯದ ಮಠ/ಶಿಕ್ಷಣ ಸಂಸ್ಥೆ ಮತ್ತು ಇತರೆ ಸಂಸ್ಥೆವಾರು ಸಂಪೂರ್ಣ ಮಾಹಿತಿ ನೀಡುವುದು) | 2008–09 ರಿಂದ 2010–11ನೇ ಸಾಲಿನ ವರೆಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಯಾವುದೇ ಮಠ-ಮಾನ್ಯ, ಶಿಕ್ಷಣ ಸಂಸ್ಥೆ ಮತ್ತು ಸಂಘ-ಸಂಸ್ಥೆಗಳಿಗೆ ನಿವೇಶನ/ಜಾಗವನ್ನು ಹಾಗೂ ಜಾಗ/ನಿವೇಶನ ಖರೀದಿಸಲು ಸರ್ಕಾರದಿಂದ ಅನುದಾನ ಮಂಜೂರು ಮಾಡಿರುವುದಿಲ್ಲ.<br>ಆದರೆ 2008–09 ರಿಂದ 2010–11ನೇ ಸಾಲಿನ ವರೆಗೆ ಮಠ-ಮಾನ್ಯ, ಶಿಕ್ಷಣ ಸಂಸ್ಥೆ ಮತ್ತು ಸಂಘ-ಸಂಸ್ಥೆಗಳಿಗೆ ಸಮುದಾಯ ಭವನ ಕಟ್ಟಡಗಳ ನಿರ್ಮಾಣಕ್ಕೆ ಅನುದಾನ ಮಂಜೂರಾತಿ ನೀಡಲಾಗಿದೆ. ಈ ಅವಧಿಯಲ್ಲಿ ಮಠ, ಶಿಕ್ಷಣ ಸಂಸ್ಥೆ ಮತ್ತು ಸಂಘ-ಸಂಸ್ಥೆಗಳ ವರ್ಷವಾರು ಬಿಡುಗಡೆ ಮಾಡಿರುವ ಅನುದಾನದ ವಿವರಗಳನ್ನು ಮೇಲಿನ ಅನುಬಂಧ-1, 1ಎ ಮತ್ತು 1ಬಿ ರಲ್ಲಿಯೇ ಒದಗಿಸಲಾಗಿದೆ. |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು,